

ಜಿನಸಿ, ತರಕಾರಿ ತರೋಕೆ ನೀವು, ಚಿನ್ನ, ಬೆಳ್ಳಿ ತರೋಕೆ ನಿಮ್ಮ ಧರ್ಮಪತ್ನಿ ಹೋಗುವ ರೂಢಿಯಾ?

ಪೊಲೀಸ್ ಅನುಮತಿ ಪಡೆಯದೆ ದೊಣ್ಣೆಗಳನ್ನು ಹಿಡಿಯುವುದು ಆಕ್ರಮಣಕಾರಿ..!!




"ಬೆಳ್ಳಿ ಗದೆ" ಕೊಡೋಣಾಂದ್ರೆ ಅಪಾಯಕಾರಿ ಆಯುಧ ಹಿಡ್ಕೊಳ್ಳೋದನ್ನ ನಿಮ್ಮ ಸರ್ಕಾರಾನೇ ನಿಷೇದಮಾಡಿದೆ, ಸಧ್ಯಕ್ಕೆ ಫೋಟೋ ತೊಗೋಳಿ..!!

**ಪತ್ರಕರ್ತ:** ನಿಮ್ಮದು ಯಾವ ಪಾರ್ಟಿ?
**ಕಾರ್ಯಕರ್ತ:** ನಮ್ಮದು ನೈಟ್ ಪಾರ್ಟಿ.

ಕೆಮ್ಮಿನ ಸಿರಪ್ : ವಿಶ್ವಾದ್ಯಂತ ಅಲರ್ಟ್




ಸಿರಪ್ ಹೆಸರು ನಾವೂ ಓದುವ ಹಾಗೆ ಬರೀರಿ..ಡಾಕ್ಟರ್!


**ಪತಿ:** ಚಂದ್ರಗ್ರಹಣ ಆಗ್ತಾ ಇದೆ. ಚಂದ್ರ ಮೆಲ್ಲ ಮೆಲ್ಲಗೆ ಕಪ್ಪಾಗ್ತ ಅವ್ನೆ, ನೋಡು ಬಾರೆ.
**ಪತ್ನಿ:** ಅಂಥ ನೂರಾರು ಚಿತ್ರಗಳು ಮೊಬೈಲ್‌ನಲ್ಲಿ ಬೆಳಗಾಗುವ ಮುನ್ನವೇ ಬರ್ತವೆ ಬನ್ರೀ.

**ಉಪನ್ಯಾಸಕ:** ದೇವರಿದ್ದಾರೆ, ನಿಮ್ಮ ಎಲ್ಲಾ ಚಿಂತೆಗಳನ್ನು ಪಕ್ಕಕ್ಕೆ ಇಟ್ಟು ಬಿಡಿ.
**ಸಭಿಕ:** ಪಕ್ಕಕ್ಕೆ ಅಂದ್ರೆ ಬಲಭಾಗಕ್ಕೆ ಇಟ್ಟರೆ ಒಳ್ಳೇದಾ? ಎಡಭಾಗಕ್ಕೆ ಇಟ್ಟರೆ ಒಳ್ಳೇದಾ?

**ಪೊಲೀಸ್:** ನಿಲ್ಲು ನೀನು ಹಾಲಿನ ಕ್ಯಾನಿನಲ್ಲಿ ಹೆಂಡ ಸಾಗಿಸುತ್ತಿದ್ದೀಯ ಅಂತ ನಮಗೆ ಮಾಹಿತಿ ಬಂದಿದೆ. ನಿನ್ನ ತಪಾಸಣೆ ಮಾಡಬೇಕು.
**ಹಾಲಿನವ:** ದೇವ್ರಾಣೆ, ಸಾರ್ ನಾನು ಹಾಲನ್ನು ಬಿಟ್ಟು ಬೇರೆ ಏನನ್ನು ಮಾರಲ್ಲ. ನೀವೇ ನೋಡಿ ಬೇಕಾದ್ರೆ ಇದು ಹಾಲೇ ಸರ್. ಈಚಲ ಮರದ್ದು ಹಾಲು ಇದು.

**ಕಲ್ಲೇಶಿ:** ನಿನ್ನ ಹೆಂಡತಿ ಆ ಆಟೊದವನ ಜೊತೆಗೆ ಜಗಳವಾಡುತ್ತಿದ್ರೆ, ಸುಮ್ನೆ ನೋಡುತ್ತ ನಿಂತಿರುವೆಯಲ್ಲ ಸಹಾಯಕ್ಕೆ ಹೋಗಬಾರದೆ.
**ಮಲ್ಲೇಶಿ:** ಅವನು ಸಹಾಯಕ್ಕೆ ಕರೆದಿದ್ದರೆ ಹೋಗುತ್ತಿದ್ದೆ, ಅವನು ಕರೆಯಲಿಲ್ಲ ನಾನೇನು ಮಾಡಲಿ.

"ಕಾಲ್ತುಳಿತ"...




ಐಟಿ ದಾಳಿ: ಕೋಟ್ಯಂತರ ರೂ. ಚಿನ್ನ ಬೆಳ್ಳಿ ಪತ್ತೆ



ಅಷ್ಟೇನೂ ಇರಲಿಕ್ಕಿಲ್ಲ! ಈಗಿನ ಚಿನ್ನದ ದರದಲ್ಲಿ ಕೋಟ್ಯಂತರ ರೂಪಾಂಯಿ ಆಗಿರಬೇಕು!



ನಿಮಗೆ ಅರ್ಥ ಶಾಸ್ತ್ರದಲ್ಲಿ ನೊಬೆಲ್ ಕೊಡಬಹುದಿತ್ತು. ಸುಂಕದಿಂದ ಆರ್ಥಿಕ ಅಭಿವೃದ್ಧಿ ಮಾಡ್ತಿದ್ದಿರಲ್ಲಾ!

**ಉಪನ್ಯಾಸಕ:** ನಾಯಕರು ಒಮ್ಮಿಂದೊಮ್ಮೆ ಉದ್ಭವಿಸುವ ಜನರಲ್ಲ, ಅವರು ಕೆಲ ಪ್ರಧಾನ ಗುಣಗಳನ್ನು ರೂಢಿಸಿಕೊಂಡು ನಾಯಕರಾಗುತ್ತಾರೆ. ನಿಮ್ಮಲ್ಲಿ ನಾಯಕರು ಯಾರಿದ್ದೀರಿ?
**ಸಭಿಕ:** ನಾನು ಸಾರ್.
**ಉಪನ್ಯಾಸಕ:** ನಿಮ್ಮಲ್ಲಿರುವ ಪ್ರಧಾನ ಗುಣಗಳ ಹೇಳುವಿರಾ?
**ಸಭಿಕ:** ನನ್ನ ಹೆಸರೇ ಸಂಜಯ್ ನಾಯಕ ಸಾರ್.

**ಮೇಷ್ಟು:** ಅಯ್ಯಾ ಬಾಲಾಜಿ, ಶಿವ ಧನಸ್ಸನ್ನು ಮುರಿದವರು ಯಾರು?
**ಬಾಲಾಜಿ:** ಶಿವನಿಗೆ ಆಗದವರು ಯಾರೋ ಮುರಿದಿರಬೇಕು ಬಿಡಿ ಸಾರ್.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ